## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 134 (117) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೆ.ಎಸ್.ನವೀನ್<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 17.08.2026 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ತುಮಕೂರು ವಿಶ್ವವಿದ್ಯಾಲಯದಲ್ಲಿ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಒಟ್ಟು ಎಷ್ಟು ವಿದ್ಯಾರ್ಥಿಗಳಿಗೆ ಪದಕ ವಿತರಣೆ ಮಾಡಲಾಗಿದೆ; | ತುಮಕೂರು ವಿಶ್ವವಿದ್ಯಾನಿಲಯದ 19ನೇ ವಾರ್ಷಿಕ ಘಟಿಕೋತ್ಸವದಲ್ಲಿ ಒಟ್ಟು 90 ವಿದ್ಯಾರ್ಥಿಗಳಿಗೆ ಪದಕ ವಿತರಣೆ ಮಾಡಲಾಗಿದೆ. |
| (ಆ) | ಈ ಘಟಿಕೋತ್ಸವದಲ್ಲಿ ಪದಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪದಕ ನೀಡುವ ಬದಲು ಹಣವನ್ನು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; | ಬಂದಿರುವುದಿಲ್ಲ ಹಾಗೂ ಈ ಬಗ್ಗೆ ಸರ್ಕಾರದಿಂದ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. |
| (ಇ) | ಈ ರೀತಿಯಾಗಿ ಪದಕದ ಬದಲು ಹಣವನ್ನು ನೀಡಿದರೆ ವಿದ್ಯಾರ್ಥಿಗಳಿಗೆ ಅವಮಾನ ಮಾಡಿದಂತಾಗುವುದಿಲ್ಲವೇ; | 1. ದಿನಾಂಕ:21.04.2026 ರಂದು ನಡೆದ 05ನೇ ವಿಶೇಷ ಸಿಂಡಿಕೇಟ್ ಸಭೆಯಲ್ಲಿ "ಚಿನ್ನದ ಪದಕಕ್ಕೆ ಸಂಬಂಧಿಸಿದಂತೆ, ದತ್ತಿ ಹಣದಿಂದ ಚಿನ್ನದ ಪದಕವನ್ನು ನೀಡಲು ಸಾಧ್ಯವಾಗದೆ ಇರುವುದರಿಂದ ಆ ದತ್ತಿ ಹಣಕ್ಕೆ ಅನುಗುಣವಾಗಿ ಚಿನ್ನದ ಪದಕವನ್ನು ಸಿದ್ಧಪಡಿಸಲು ಅವಕಾಶವಿದ್ದಲ್ಲಿ, ಅಥವಾ ಇಲ್ಲದಿದ್ದಲ್ಲಿ ನಗದು ಬಹುಮಾನ ನೀಡಲು ಹಾಗೂ ಉತ್ತಮ ಗುಣಮಟ್ಟದ ಪ್ರಮಾಣ ಪತ್ರವನ್ನು ನೀಡಲು" |

| | | |
|---|---|---|
| | | ತೀರ್ಮಾನಿಸಲಾಗಿರುತ್ತದೆ.<br>2. 19 ನೇ ವಾರ್ಷಿಕ ಘಟಿಕೋತ್ಸವದಲ್ಲಿ ಒಟ್ಟು 90 ವಿದ್ಯಾರ್ಥಿಗಳಿಗೆ 117 ಪದಕಗಳನ್ನು ವಿತರಿಸುವ ಸಲುವಾಗಿ ಕೆ.ಟಿ.ಪಿ.ಪಿ ಮೂಲಕ ಟೆಂಡರ್ ಆಹ್ವಾನಿಸಿ ಎಲ್-1 ದರ ನಮೂದಿಸಿ ಸಂಸ್ಥೆಯಾದ M/s. VIPUL JAIN (VIABLE DIAMONDS), No.18, Ganesh Colony, Rambag, Indore, Madhya Pradesh-452004 ಇವರಿಗೆ ಪದಕಗಳನ್ನು ಸರಬರಾಜು ಮಾಡಲು ಕಾರ್ಯಾದೇಶ ನೀಡಲಾಗಿರುತ್ತದೆ. ಆದರೆ, ಗುತ್ತಿಗೆದಾರರು ಘಟಿಕೋತ್ಸವದ ದಿನದವರೆಗೂ ಪದಕಗಳನ್ನು ವಿಮಾನದಲ್ಲಿ ತರಲಾಗುತ್ತಿದೆ ಎಂದು ದಾಖಲೆಗಳ ಮೂಲಕ ಸಂದೇಶಗಳನ್ನು ಕಳುಹಿಸಿ ದೂರವಾಣಿಯಲ್ಲಿ ನಿರಂತರ ಸಂಪರ್ಕದಲ್ಲಿದ್ದಾಗ್ಯೂ, ಕೊನೆಯ ಘಳಿಗೆಯಲ್ಲಿ ದೂರವಾಣಿ ಸ್ವಿಚ್ ಆಫ್ ಮಾಡಿಕೊಂಡಿರುತ್ತಾರೆ. ಈ ಹಿನ್ನಲೆಯಲ್ಲಿ ಸಮಯಕ್ಕೆ ಸರಿಯಾಗಿ ಪದಕಗಳು ವಿಶ್ವವಿದ್ಯಾನಿಲಯವನ್ನು ತಲುಪಿರುವುದಿಲ್ಲ.<br>3. ಈ ಸಂದರ್ಭದಲ್ಲಿ ಸಿಂಡಿಕೇಟ್ ಸಭೆಯ ನಿರ್ಣಯದಂತೆ, ವಿದ್ಯಾರ್ಥಿಗಳಿಗೆ ಘಟಿಕೋತ್ಸವ ದಿನದಂದು ಬರಿಗೈಯಲ್ಲಿ ಕಳುಹಿಸದೆ, ಪದಕಕ್ಕೆ ತಗಲುವ ವೆಚ್ಚದ ಮೊತ್ತವನ್ನು ಧನಾದೇಶದ ರೂಪದಲ್ಲಿ ನೀಡಲಾಗಿರುತ್ತದೆ.<br>4. ಘಟಿಕೋತ್ಸವದ ನಂತರದಲ್ಲಿ ಗುತ್ತಿಗೆದಾರರು ಪದಕಗಳನ್ನು ಪೂರೈಸಿದ ಹಿನ್ನಲೆಯಲ್ಲಿ ವಿದ್ಯಾರ್ಥಿಗಳೇ ನಿಗದಿಪಡಿಸಿದ ದಿನಾಂಕದಂದು ಪದಕಗಳನ್ನು ವಿತರಿಸಿ, ಧನಾದೇಶಗಳನ್ನು ಹಿಂಪಡೆಯಲಾಗಿರುತ್ತದೆ.<br>5. ವಿದ್ಯಾರ್ಥಿಗಳಿಗೆ ಧನಾದೇಶವನ್ನು |

| | | |
|---|---|---|
| | | ಘಟಿಕೋತ್ಸವ ಸಮಾರಂಭದ ವೇದಿಕೆಯ ಮೇಲೆ ವಿತರಿಸಲಾಗಿದೆ ಹಾಗೂ ವಿದ್ಯಾರ್ಥಿಗಳೇ ನಿಗದಿಪಡಿಸಿದ ದಿನಾಂಕದಂದು ಮತ್ತೊಮ್ಮೆ ಕಾರ್ಯಕ್ರಮವನ್ನು ಏರ್ಪಡಿಸಿ ಪದಕಗಳನ್ನು ವಿತರಿಸಿ ವಿದ್ಯಾರ್ಥಿಗಳನ್ನು ಗೌರವಯುತವಾಗಿ ನಡೆಸಿಕೊಳ್ಳಲಾಗಿದೆ. |
| (ಈ) | ಈ ಘಟಿಕೋತ್ಸವದಲ್ಲಿ ಕಾರ್ಯಕ್ರಮದ ಅಂಗವಾಗಿ ಪದಕ ವಿತರಣೆಯನ್ನು ಮಾಡಲು ವಿಶ್ವವಿದ್ಯಾಲಯ ಯಾವುದಾದರು ಸಂಸ್ಥೆಗೆ (ಏಜೆನ್ಸಿಗೆ) ನೀಡಲಾಗಿತ್ತೆ; ನೀಡಿದ್ದಲ್ಲಿ, ಏಜೆನ್ಸಿಯ ಹೆಸರು ಮತ್ತು ಸಂಪೂರ್ಣ ವಿವರ ನೀಡುವುದು? | 19ನೇ ವಾರ್ಷಿಕ ಘಟಿಕೋತ್ಸವದಲ್ಲಿ ಒಟ್ಟು 90 ವಿದ್ಯಾರ್ಥಿಗಳಿಗೆ 117 ಪದಕಗಳನ್ನು ವಿತರಿಸುವ ಸಲುವಾಗಿ ಕೆ.ಟಿ.ಪಿ.ಪಿ ಮೂಲಕ ಕೆಳಕಂಡ ಸಂಸ್ಥೆಯಿಂದ ಟೆಂಡರ್ ಆಹ್ವಾನಿಸಲಾಗಿದೆ.<br><br>M/s. VIPUL JAIN (VIABLE DIAMONDS) No.18, Ganesh Colony Rambag, Indore, Madhya Pradesh-452004 |

ಸಂಖ್ಯೆ: ಇಡಿ 32 ಯುಟಿಟಿ 2026

(ಬಸವರಾಜ ರಾಯರಡ್ಡಿ)
ಉನ್ನತ ಶಿಕ್ಷಣ ಸಚಿವರು